ಆ. ಮಾಜಿ ಪ್ರಧಾನಿಯವರಾದ ಶ್ರೀ ಹೆಚ್.ಡಿ.ದೇವೇಗೌಡ, ಇವರನ್ನು ಅಭಿಯೋಗಗೊಳಿಸಲು ಕರ್ನಾಟಕ ವೃಂದದ ಭಾರತೀಯ ಆಡಳಿತ ಸೇವೆಗೆ ಸೇರಿದ ಶ್ರೀ ಜಯಕರ್ ಜೆರೋಮೆ, ಇವರು ಅನುಮತಿ ಕೇಳಿರುತ್ತಾರೆ.

ಇ. ನಿರಾಕರಿಸಲಾಗಿದೆ.

ಈ. ಸಮರ್ಥನೀಯ ದಾಖಲೆಗಳನ್ನು ಒದಗಿಸಲು ವಿಫಲರಾದ್ದರಿಂದ, ಅನುಮತಿಯನ್ನು ನಿರಾಕರಿಸಲಾಗಿರುತ್ತದೆ.

1580 (1892) ಶ್ರೀ ಜಯಪ್ರಕಾಶ್ ಹೆಗ್ಡೆ. ಕೆ. (ಬ್ರಹ್ಮಾವರ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸಿ.ಐ.ಟಿ.ಬಿ. ಮತ್ತು ಬಿ.ಡಿ.ಎ. ಇದುವರೆವಿಗೂ ಹಂಚಿಕೆ ಮಾಡಿರುವ ನಿವೇಶನಗಳು ಎಷ್ಟು :

ಆ. ಲೋಕಸಭಾ, ರಾಜ್ಯಸಭಾ ಹಾಗೂ ಶಾಸಕರಿಗೆ ನೀಡಿರುವ ನಿವೇಶನಗಳು ಎಷ್ಟು, ಯಾರು ಯಾರಿಗೆ ನೀಡಲಾಗಿದೆ ಪ್ರತ್ಯೇಕವಾದ ವಿವರ ಪಟ್ಟಿ ನೀಡುವುದು) :

ಇ. ನಿವೇಶನ ಹಂಚಿಕೆ ವಿಷಯದಲ್ಲಿ ಶಾಸಕರು ಹಾಗೂ ಲೋಕಸಭಾ ಸದಸ್ಯರಿಗೆ ಎಷ್ಟು ಬಾರಿ ನಿವೇಶನ ನೀಡಲಾಗುವುದು :

ಈ. ಇದುವರೆವಿಗೆ ಎಷ್ಟು ಮಂದಿಗೆ ಒಂದಕ್ಕಿಂತ ಹೆಚ್ಚು ನಿವೇಶನ ಮಂಜೂರಾತಿ ಆಗಿದೆ ವಿವರ ನೀಡುವುದು :

ಉ. ಇದುವರೆವಿಗೆ ಶಾಸಕರ "ಗೃಹ ನಿರ್ಮಾಣ ಸಂಘ" ಹಾಗೂ ಬಿ.ಡಿ.ಎ. ಎರಡರಿಂದಲೂ ನಿವೇಶನ ಹಂಚಿಕೆಯಾದವರ ವಿವರ ನೀಡುವುದು ?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು)

ಅ. 1,26,449

ಆ. 811 ಲೋಕಸಭಾ, ರಾಜ್ಯಸಭಾ ಹಾಗೂ ಶಾಸಕರುಗಳಿಗೆ ಶಾಸಕರ ಗೃಹ ನಿರ್ಮಾಣ ಸಹಕಾರ ಸಂಘದ ವತಿಯಿಂದ ಮತ್ತು ಸರ್ಕಾರದ ಆದೇಶದನ್ವಯ ಜಿ ಪ್ರವರ್ಗದಲ್ಲಿ ಬಿಡಿ ನಿವೇಶನವನ್ನು ಹಂಚಿಕೆ ಮಾಡಲಾಗಿರುತ್ತದೆ. (ವಿವರಗಳನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು)

ಇ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ನಿವೇಶನ ಹಂಚಿಕೆ) ನಿಯಮಗಳು, 1984 ರನ್ವಯ ಒಬ್ಬ ವ್ಯಕ್ತಿಗೆ ಒಂದೇ ಬಾರಿ ಮಾತ್ರ ನಿವೇಶನ ಹಂಚಿಕೆ ಮಾಡಲು ಅವಕಾಶವಿರುತ್ತದೆ.

ಈ. ಶ್ರೀ ಹೆಚ್.ಎನ್. ನಂಜೇಗೌಡ, ಮಾಜಿ ಶಾಸಕರು, ಶ್ರೀ ವಿನ್‌ಫ್ರೆಡ್ ಫರ್ನಾಂಡೀಸ್, ಮಾಜಿ ವಿಧಾನ ಪರಿಷತ್ ಸದಸ್ಯರು, ಶ್ರೀ ಎಸ್.ಜಿ. ನಂಜಯ್ಯನಮಠ, ಮಾಜಿ ಶಾಸಕರು.

ಉ. ಮೇಲಿನ ಉಪ ಪ್ರಶ್ನೆ (ಈ) ಗೆ ನೀಡಿದ ಉತ್ತರ ಅನ್ವಯಿಸುತ್ತದೆ.

1581 (1893) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬ್ರಹ್ಮಾವರ ವಿಧಾನಸಭಾ ಕ್ಷೇತ್ರದಲ್ಲಿ ಕೆರೆಗಳಲ್ಲಿ ಹೊಳೆತ್ತುವ ಕಾರ್ಯಯೋಜನೆಯಲ್ಲಿ ಎಷ್ಟು ಕೆರೆಗಳನ್ನು ಗುರುತಿಸಲಾಗಿದೆ :

ಆ. ಇದುವರೆವಿಗೆ ಈ ಯೋಜನೆಯಡಿ ನೀಡಿರುವ ಅನುದಾನ ಎಷ್ಟು ;

ಇ. ಈ ವರ್ಷ ಈ ಯೋಜನೆಯಡಿ ಆಗಿರುವ ಪ್ರಗತಿಯ ವರ ನೀಡುವುದು ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ) :

ಅ. ಯಾವುದೂ ಇಲ್ಲ.

ಆ. ಕಾರ್ಯಾಯೋಜನೆ ಇಲ್ಲದ ಕಾರಣ ಅನುದಾನದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

1582 (1894)ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ. ಎಂ ಎಲ್ ಎ (ಬ್ರಹ್ಮಾವರ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ನಗರದಲ್ಲಿ ನಿರ್ಮಾಣ ಹಂತದಲ್ಲಿರುವ ಮೇಲುಸೇತುವೆಗಳು ಎಷ್ಟು : (ಸಂಪೂರ್ಣ ವಿವರ ನೀಡುವುದು)

ಆ. ಕೆಲವು ಮೇಲುಸೇತುವೆಗಳ ನಿರ್ಮಾಣ ಕಾರ್ಯ ವಿಳಂಬದಿಂದಾಗಿ ಆಗಿರುವ ಅವ್ಯವಸ್ಥೆಯು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ. ಈ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳು ಯಾವುವು ;

ಈ. ಮೇಲುಸೇತುವೆ ನಿರ್ಮಾಣ ಕಾರ್ಯಕ್ಕೆ ನೀಡಿರುವ ಹಣ ಎಷ್ಟು; ಕೆಲವು ಮೇಲುಸೇತುವೆಗಳ ನಿರ್ಮಾಣ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಯವರು) :

ಅ. 1. ಬೆಂಗಳೂರು ಮಹಾನಗರ ಪಾಲಿಕೆಯು ಕೈಗೆತ್ತಿಕೊಂಡಿರುವ ಈ ಕೆಳಕಂಡ ಮೇಲು ಸೇತುವೆಗಳು / ಗ್ರೇಡ್ ಸೆಪರೇಟರ್‌ಗಳು ನಿರ್ಮಾಣದ ಹಂತದಲ್ಲಿರುತ್ತವೆ.

1. ರಾಜಾಜಿನಗರ ಗ್ರೇಡ್ ಸೆಪರೇಟರ್
2. ಮೋದಿ ರಸ್ತೆ ಕಾರ್ಡ್ ರಸ್ತೆ ಗ್ರೇಡ್ ಸೆಪರೇಟರ್
3. ಬಾಣಸವಾಡಿ ರೈಲ್ವೆ ಮೇಲು ಸೇತುವೆ
4. ನ್ಯಾಷನಲ್ ಕಾಲೇಜ್ ಮೇಲು ಸೇತುವೆ

2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೈಗೆತ್ತಿಕೊಂಡಿರುವ ಈ ಕೆಳಕಂಡ ಮೇಲು ಸೇತುವೆಗಳು/ ಗ್ರೇಡ್ ಸೆಪರೇಟರ್‌ಗಳು ನಿರ್ಮಾಣದ ಹಂತದಲ್ಲಿರುತ್ತವೆ.

1. ಏರ್‌ಪೋರ್ಟ್ ರಸ್ತೆಯಲ್ಲಿ ಮೇಲು ಸೇತುವೆ,
2. ಜಯದೇವ ಹೃದ್ರೋಗ ಕೇಂದ್ರ ಬಳಿ ಮೇಲು ಸೇತುವೆ,
3. ಆನಂದ್‌ರಾವ್ ವೃತ್ತದಲ್ಲಿ ಮೇಲು ಸೇತುವೆ.

ಆ. ಹೌದು

ಇ. ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಬದಲಿ ಸಂಚಾರ ವ್ಯವಸ್ಥೆ ಸಹ ಮಾಡಲಾಗಿದೆ.

ಅಲ್ಲದೆ, ಗುತ್ತಿಗೆದಾರರ ವೈಫಲ್ಯದಿಂದಾಗಿ ಏರ್‌ಪೋರ್ಟ್ ರಸ್ತೆ ಮತ್ತು ಜಯದೇವ ಹೃದ್ರೋಗ ಕೇಂದ್ರದ ಬಳಿಯ ಮೇಲು ಸೇತುವೆ ನಿರ್ಮಾಣ ಗುತ್ತಿಗೆಯನ್ನು ರದ್ದುಪಡಿಸಲಾಗಿದೆ. ಮತ್ತು ಬಾಕಿ ಕಾಮಗಾರಿಗಳಿಗೆ ಮರು ಗುತ್ತಿಗೆಗಳನ್ನು ಆಹ್ವಾನಿಸಲಾಗಿದೆ.